



ಹೆಚ್ಚುತ್ತಿರುವ ಆನೆಗಳ ಸಂತತಿಯನ್ನು ನಿಯಂತ್ರಿಸುವ ಉದ್ದೇಶದಿಂದ ಥಾಯ್ಲೆಂಡ್‌ನಲ್ಲಿ ಇದೇ ಮೊದಲ ಬಾರಿಗೆ ಸಂತಾನ ನಿಯಂತ್ರಣ ಲಸಿಕೆಯನ್ನು ಪ್ರಯೋಗಿಸಲಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಅಲ್ಲಿಯ ಆಫ್ರಿಕನ್ ಹೆಣ್ಣಾನೆಗಳ ಮೇಲೆ ಪ್ರಯೋಗ ನಡೆದರೆ ಥಾಯ್ಲೆಂಡ್‌ನಲ್ಲಿ ನಡೆದಿರುವುದು ಏಷ್ಯಾಟಿಕ್ ಆನೆಗಳ ಮೇಲೆ. ಇವು ಭಾರತೀಯ ಆನೆಗಳಿಗೆ ತೀರಾ ಹತ್ತಿರ.

ಇಲ್ಲಿಯ ಆಗ್ನೇಯ ದಿಕ್ಕಿನ ಟ್ರಾಟ್ ಪ್ರಾಂತ್ಯದಲ್ಲಿ ಕೆಲ ದಿನಗಳ ಹಿಂದೆ ಮೂರು ಹೆಣ್ಣಾನೆಗಳಿಗೆ ವನ್ಯಜೀವಿ ಅಧಿಕಾರಿಗಳು ಲಸಿಕೆಯನ್ನು ಪ್ರಯೋಗಿಸಿದರು ಎಂದು ವನ್ಯಜೀವಿ ಸಂರಕ್ಷಣಾ ನಿರ್ದೇಶಕ ಸೂಕಿ ಬೋನ್‌ಸಂಗ್ ತಿಳಿಸಿದ್ದಾರೆ.

ಥಾಯ್ಲೆಂಡ್‌ನ ಉಳಿದ ಪ್ರಾಂತ್ಯಗಳಲ್ಲಿ ಆನೆಗಳ ಸಂತತಿ ಬೆಳವಣಿಗೆ ಶೇ ಮೂರರಷ್ಟಿದ್ದರೆ ಪೂರ್ವದ ಐದು ಪ್ರಾಂತ್ಯಗಳಲ್ಲಿ ಬೆಳವಣಿಗೆಯು ಶೇ ಎಂಟಕ್ಕೆ ಏರಿದೆ. 2015ರಲ್ಲಿ ದೇಶದಲ್ಲಿ 335ರಷ್ಟಿದ್ದ ಕಾಡು ಆನೆಗಳ ಸಂಖ್ಯೆಯು ಇದೀಗ 800ಕ್ಕೆ ಏರಿದೆ. ಅಲ್ಲಿಯೂ ಆನೆ– ಮಾನವ ಸಂಘರ್ಷದಲ್ಲಿ ದೇಶದಲ್ಲಿ 2012ರಿಂದ ಈಚೆಗೆ 200ಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದರೆ ಸುಮಾರು ನೂರು ಆನೆಗಳು ಸಹ ಸತ್ತಿವೆ. ಮುಂದಿನ ದಿನಗಳಲ್ಲಿ ಈ ಸಂಘರ್ಷವನ್ನು ತಡೆಯಲು ಈ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ಲಸಿಕೆ ಪಡೆದ ಮೂರು ಹೆಣ್ಣಾನೆಗಳು ಆರೋಗ್ಯದಿಂದ ಇವೆ. ಯಾವುದೇ ಸೋಂಕು ತಗುಲಿಲ್ಲ. ಮುಂದಿನ ದಿನಗಳಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಲಸಿಕೆ ಪಡೆದ ಆನೆಗಳ ರಕ್ತ ಪರೀಕ್ಷೆ ಮಾಡಲಾಗುತ್ತದೆ ಎಂದು ಸೂಕಿ ತಿಳಿಸಿದ್ದಾರೆ. ಈ ಲಸಿಕೆಯನ್ನು ದೇಶದ ಉತ್ತರ ಚಿಯಾಂಗ್ ಮಿ ಪ್ರಾಂತ್ಯದಲ್ಲಿ ಏಳು ಸಾಕಾನೆಗಳ ಮೇಲೆ ಎರಡು ವರ್ಷದ ಹಿಂದೆ ಪ್ರಯೋಗಿಸಲಾಗಿತ್ತು. ಪ್ರಯೋಗ ಯಶಸ್ವಿಯಾದ ಕಾರಣದಿಂದ ಕಾಡಾನೆಗಳ ಮೇಲೆ ಪ್ರಯೋಗ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಆನೆ– ಮಾನವ ಸಂಘರ್ಷ ವ್ಯಾಪಕವಾಗಿ ನಡೆಯುತ್ತಿದ್ದರೂ ಮತ್ತು ಪಿಜಡ್‌ಪಿ ಲಸಿಕೆ ಬಗ್ಗೆ ಗೊತ್ತಿದ್ದರೂ ರಾಜ್ಯ ಅರಣ್ಯ ಇಲಾಖೆ ಏನೂ ಕ್ರಮ ತೆಗೆದುಕೊಂಡಿಲ್ಲವೇ ಎನ್ನುವ ಅನುಮಾನ ಬರುತ್ತದೆ. ಇದರ ಬಗ್ಗೆ 2016ರಲ್ಲೇ ಅಂದಿನ ಪಿಸಿಸಿಎಫ್ (ವನ್ಯಜೀವಿ) ಅವರ ಅಧ್ಯಕ್ಷತೆಯಲ್ಲಿ ಹಿರಿಯ ಅಧಿಕಾರಿಗಳ ಸಭೆ ನಡೆದು 'ಹ್ಯೂಮನ್ ಸೊಸೈಟಿ ಇಂಟರ್‌ನ್ಯಾಷನಲ್'ನ ಸುಮಂತ್ ಅವರು ದಕ್ಷಿಣ ಆಫ್ರಿಕಾದಲ್ಲಿ ನಡೆದಿರುವ ಸಂತಾನ ನಿಯಂತ್ರಣ ಲಸಿಕೆ ಪ್ರಯೋಗದ ಬಗ್ಗೆ ಸಂಪೂರ್ಣ ವಿವರ ನೀಡಿದ್ದರು.



ಆದರೆ ಪಶ್ಚಿಮ ಬಂಗಾಳದಲ್ಲಿ ಇದೇ ಲಸಿಕೆಯ ಪ್ರಯೋಗ ನಡೆಸಲು ಮುಂದಾದಾಗ ಕೆಲ ಸ್ವಯಂಸೇವಾ ಸಂಘಟನೆಗಳು ಆನೆಗಿರುವ ದೈವಿಕ ಭಾವನೆಯನ್ನು ಸುಪ್ರೀಂ ಕೋರ್ಟ್‌ನ ಗಮನಕ್ಕೆ ತಂದು ಪ್ರಯೋಗಕ್ಕೆ ತಡೆಯಾಜ್ಞೆ ಪಡೆದಿದ್ದರು. ಈ ತಡೆ ಸಂಪೂರ್ಣ ದೇಶಕ್ಕೆ ಅನ್ವಯವಾಗುವುದು ಅಂದು ನಡೆದಿದ್ದ ಸಭೆಯಲ್ಲಿ ಚರ್ಚೆಗೆ ಬಂದಿದೆ.

ಲಸಿಕೆ ಪರೀಕ್ಷೆ ಆರಂಭಿಸಲು ಸೂಕ್ತ ಆದೇಶಗಳನ್ನು ಪಡೆದು ಅರಣ್ಯ ಇಲಾಖೆಯ ಶಿಬಿರಗಳಲ್ಲಿರುವ ಆನೆಗಳ ಮೇಲೆ ಈ ಪ್ರಯೋಗ ನಡೆಸಲು ಅಂದೇ ತೀರ್ಮಾನ ಮಾಡಲಾಗಿತ್ತು. ಇದಾಗಿ ಹತ್ತು ವರ್ಷವಾದರೂ ಪ್ರಗತಿಪರ ರಾಜ್ಯ ಎನಿಸಿಕೊಂಡ ಕರ್ನಾಟಕದಲ್ಲಿ ಯಾವುದೇ ಮಹತ್ವದ ಬೆಳವಣಿಗೆ ಆಗಿಲ್ಲ. ಎಲ್ಲಾ ರೀತಿಯ ಅನುಮತಿ ಪಡೆದು ಆನೆ ಶಿಬಿರದಲ್ಲಿ ಪ್ರಯೋಗ ನಡೆಸಿದ್ದರೆ, ಇಂದು ಹಾಸನ ಹಾಗೂ ಕೊಡಗಿನ ಕಾಡಿನಂಚಿನ ಕಾಫಿ ತೋಟದ ಸುತ್ತಮುತ್ತ ನೆಲೆಸಿರುವ ಆನೆಗಳ ಮೇಲೆ ಲಸಿಕೆ ಪ್ರಯೋಗ ನಡೆಯಬಹುದಿತ್ತು.

ಕಾಡಿನಂಚಿನ ಗ್ರಾಮಸ್ಥರ ಅಳಲನ್ನು ಗಮನಿಸಿದರೆ ಪುಂಡಾನೆಗಳ ಸಂತತಿ ನಿಯಂತ್ರಣ ಆಗಲೇಬೇಕು. ಸೆರೆ ಹಿಡಿಯುವುದು ತಾತ್ಕಾಲಿಕ ಪರಿಹಾರ ಮಾತ್ರ. ಇಲ್ಲವಾದರೆ ಈಗಿರುವ ಕಾಡಿನ ಗುಣಮಟ್ಟ ಹೆಚ್ಚಿಸಬೇಕು ಜೊತೆಗೆ ಕಾಡಿನಂಚಿನ ಕಂದಾಯ ಜಮೀನಿನಲ್ಲಿ ಮತ್ತಷ್ಟು ಕಾಡನ್ನು ಬೆಳೆಸಬೇಕು.

ಪ್ರತಿಕ್ರಿಯಿಸಿ: **feedback@sudha.co.in**